ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp.57 - 64
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

ವಚನ ಸಾಹಿತ್ಯದಲ್ಲಿ ಸ್ತ್ರೀಪರ ಚಿಂತನೆಗಳು

ಡಾ.ಕೆ.ಜಿ. ಚವಾಣ

ಪ್ರಾಚಾರ್ಯರು ಹಾಗೂ ಕನ್ನಡ ಸಹ ಪ್ರಾಧ್ಯಾಪಕರು, ಎಸ್.ಜೆ.ಎಂ. ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜು, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ

Abstract:

ಹನ್ನೆರಡನೆಯ ಶತಮಾನದ ಸಂಧಿಕಾಲದಲ್ಲಿ ಪ್ರಾರಂಭವಾದ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಪ್ರಗತಿ ಮತ್ತು ಪರಿವರ್ತನೆಗಳು ವಚನಕಾರರ ಬದುಕಿನಲ್ಲಿಯೂ ಆಧುನಿಕತೆಯ ಹೊಸ ಗಾಳಿ–ಬೆಳಕಿನ ಪ್ರವೇಶವನ್ನು ಸಾಧ್ಯವಾಗಿಸಿದವು. ಶರಣ ಸಂಸ್ಕೃತಿಯ ಮೌಲ್ಯಾದರ್ಶಗಳನ್ನು ವಚನಕಾರ್ತಿಯರು ಸ್ವ–ಅಭಿವ್ಯಕ್ತಿಯ ಸ್ವರೂಪವನ್ನು ತಮ್ಮ ಬದುಕಿನ ಮೂಲಕ ನೀಡಿ ನಾಡಿಗೆ ಬೆಳಕಾದರು. ಧರ್ಮ, ವಚನಸಾಹಿತ್ಯ, ಅನುಭಾವ ಚಿಂತನೆ, ಆಧ್ಯಾತ್ಮದ ಹಂಬಲದಿಂದ ವಚನ ರಚನೆಯಲ್ಲಿ ತೊಡಗಿದರು. ಸ್ವಯಂಸಿದ್ಧ ವ್ಯಕ್ತಿತ್ವದ ಆಚಾರ ಸಂಪನ್ನರು ಕೌಟುಂಬಿಕ ಹೊಣೆಗಾರಿಕೆಯನ್ನು ನಿಭಾಯಿಸುತ್ತ ಅಲ್ಪ ತೃಪ್ತಿಗೆ ಅಂಟಿಕೊಳ್ಳದೆ ತಮ್ಮ ತಮ್ಮ ಅಂತರಾತ್ಮದ ಹಸಿವೆಯನ್ನು ಅರಿತು ರೂಢಿಸಿಕೊಂಡರು. ವ್ಯಕ್ತಿತ್ವ, ಅಸ್ತಿತ್ವ ಮತ್ತು ಅಸ್ಮಿತೆಯನ್ನು ಸಾಮಾಜಿಕ ಧಾರ್ಮಿಕ ನೆಲೆಯಲ್ಲಿ ಪುರಸ್ಕರಿಸಿದ ಶರಣ ಸಂಸ್ಕೃತಿಯು ವಚನಕಾರ್ತಿಯರನ್ನು ವಿಚಾರ ಪತ್ನಿಯಾಗಿ ಗೌರವಿಸಿದುದು ಜಾಗತಿಕ ಚರಿತ್ರೆಯಲ್ಲಿಯೇ ಅನನ್ಯವಾದುದು.

Keywords: *ವಚನ ಸಾಹಿತ್ಯ, ಶಿವಶರಣರು, ಸ್ತ್ರೀಪರ ಚಿಂತನೆ, ಅಕ್ಕಾಮಹಾದೇವಿ.*

ಪೀಠಿಕೆ

ಅಬಲೆ ಆಶ್ರಯಿತೆ ಕನಿಷ್ಠೆಯೆನ್ನುವ ಶತಮಾನಗಳ ಸಾಂಪ್ರದಾಯಿಕ ಸ್ತ್ರೀ ಪ್ರತೀಕವನ್ನು ಒಡೆದು ಸ್ತ್ರೀತ್ವವನ್ನು ಆತ್ಮಚೈತನ್ಯವಾಗಿ "ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ" ಎನ್ನುವ ಅತ್ಯುನ್ನತ ನೆಲೆಯಲ್ಲಿ ವ್ಯಾಖ್ಯಾನಿಸಿದ ಶರಣೆಯರ ಜೀವಪರ ಕಾಣ್ಕೆಯ ಫಲವಾಗಿ ಅಕ್ಕಮಹಾದೇವಿ, ನೀಲಾಂಬಿಕೆ, ಗಂಗಾಂಬಿಕೆ ಹಡಪದಲಿಂಗಮ್ಮ, ಲಕ್ಕಮ್ಮ, ಸತ್ಯಕ್ಕ, ಮುಕ್ತಾಯಕ್ಕ, ಅಕ್ಕನಾಗಮ್ಮ, ಮೋಳಿಗೆಯ ಮಹಾದೇವಿಯಮ್ಮನಂಥ ಸ್ತ್ರೀ ಚೈತನ್ಯಗಳು ಪ್ರಕಟಗೊಂಡವು. ಸಾಮರಸ್ಯ ದಾಂಪತ್ಯದ ಸಿದ್ಧ ಸೂತ್ರದಲ್ಲಿಯೂ ತಮ್ಮ ಅನನ್ಯತೆಯನ್ನು ಕಂಡುಕೊಂಡು ಸ್ತ್ರೀತ್ವಕ್ಕೆ ಹೊಸ ವ್ಯಾಖ್ಯಾನವಾಗಿ ಬೆಳೆದರು. 12ನೇ ಶತಮಾನದಲ್ಲಿ ಮೊದಲ ಬಾರಿಗೆ ಶಿಷ್ಟಸಾಹಿತ್ಯ ವಾಹಿನಿಯಲ್ಲಿ ಕಾಣಿಸಿಕೊಂಡ ಶರಣೆಯರ ಸಾಹಿತ್ಯಾಭಿವ್ಯಕ್ತಿಯ ಮುಂದಿನ ಶತಮಾನಗಳಲ್ಲಿ ಬಹುಮಟ್ಟಿಗೆ ಗುಪ್ತಗಾಮಿನಿಯಾಗಿದೆ. ಕಳೆದ ಶತಮಾನ ಮಹಿಳಾ ಸೃಜನಶೀಲತೆಗೆ ಶಕ್ತಿ ಸಂಚಯವಾದ ಕಾಲ. ವಚನಕಾರ್ತಿಯರ ವೈಚಾರಿಕತೆಯನ್ನು ಪ್ರಭಾವಿಸಿರುವ ವಿಭಿನ್ನ ಆಲೋಚನಾಕ್ರಮಗಳು ಕನ್ನಡ ಮಹಿಳೆಯರ ಆಲೋಚನೆ ಮತ್ತು ಅಭಿವ್ಯಕ್ತಿಯನ್ನು ಪ್ರಭಾವಿಸಿವೆ.

ಪ್ರಪಂಚ ಪಾರಮಾರ್ಥವೆರಡನ್ನೂ ಪ್ರವೇಶಿಸಿದ ವಚನಕಾರ್ತಿಯರ ಪರಂಪರೆ ಮನ–ಮತಿಗೆ

Please cite this article as: ಚವಾಣ ಕೆ.ಜಿ. (2024). ವಚನ ಸಾಹಿತ್ಯದಲ್ಲಿ ಸ್ತ್ರೀಪರ ಚಿಂತನೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(6), 57–64.

ಬೆಳಕನ್ನಿತ್ತು ಒಳ–ಹೊರಗೊಂದಾಗಿ ಆಡಿದ ಮಾತು ವಚನ ಎನ್ನುವ ಶರಣರಿಗೆ ವಚನ ಆತ್ಮ–ಪರಮಾತ್ಮ ಅನುಸಂಧಾನದ ಕುರುಹು ಆಗಿದೆ. ಪ್ರಪಂಚವೇ ಕೊಳದೊಳಗಿಳಿದುಪಾರಮಾರ್ಥದ ಶ್ರೀಗಿರಿಯನೇರಲು ಹವಣಿಸುವ ಆಧ್ಯಾತ್ಮಿಕ ಪಯಣದ ಸಂಕಟಗಳನ್ನು ದಿಗ್ದರ್ಶಕ ಗುರುಶಕ್ತಿಯ ಅನುಗ್ರಹವನ್ನು ಹಾರೈಸುವ ವಚನಗಳಲ್ಲಿ ಭಕ್ತಹೃದಯದ ಆರ್ತತೆ ಅಭಿವ್ಯಕ್ತಿಯಾಗಿದೆ. ಭಾವ ಭಾಷೆಯ ಹದಗಾರಿಕೆಯಲ್ಲಿ ಸತ್ವಪೂರ್ಣವಾಗಿರುವ ಹಲವಾರು ವಚನಗಳು ಸ್ವಾನುಭವದ ಮಿಡಿತಗಳನ್ನು ಶರಣ ಸಂಸ್ಕೃತಿಯ ಒಲವು ಮತ್ತು ಜೀವನಾನುಭವದ ಉತ್ಕಟ ಕ್ಷಣಗಳನ್ನು ಸಾರ್ಥಕವಾಗಿ ಪಡಿಮೂಡಿಸಿದೆ. ವಚನಗಳು ಲಯ, ವಿನ್ಯಾಸ, ಭಾಷೆ ಮತ್ತು ರಾಚನಿಕ ಲಕ್ಷಣಗಳನ್ನು ಒಳಗೊಂಡಿವೆ. ಧರ್ಮ, ಸಂಸ್ಕೃತಿ ಚಿಂತನೆ ಸಮಾಜದ ವಿಮರ್ಶೆ ಆತ್ಮ ಸಾಕ್ಷಿಯ ನುಡಿಯಾಗಿದ್ದು ಕ್ರಿಯಾಯೋಗವಾಗಿದೆ. ನಡೆನುಡಿ ಸಾಮರಸ್ಯದ ಸಂಕೇತವಾಗಿದ್ದು ಬುದ್ಧಿ ಭಾವ ಪ್ರಜ್ಞೆಯನ್ನು ಕತ್ತಲೆಯಾಗಿಸಿದ ತಮಂಧದ ಕೊಳೆಯನ್ನು ಕಳೆದು ಒಳಗಣ್ಣನ್ನು ಹೊಳೆಯಿಸಿ ಪಾರಮಾರ್ಥದ ಬೆಳಗನಿತ್ತ ಅನನ್ಯ ಕೃತಜ್ಞತೆ ಮತ್ತು ಭಕ್ತಿಯಿಂದ ಸ್ಮರಿಸುವ ಹಲವಾರು ವಚನಗಳು ಗುರುಭಕ್ತಿಯನ್ನುಪರಿಚಯಿಸುತ್ತವೆ. ಗುರುಸ್ಮರಣೆಯಷ್ಟೇ ಪ್ರಿಯವಾದುದು ಗುರುಸ್ತುತಿ ತಮ್ಮ ಆಧ್ಯಾತ್ಮಿಕ ಆಸಕ್ತಿಯನ್ನು ಪೋಷಿಸಿ ಮಾರ್ಗದರ್ಶನ ನೀಡಿದ ಶರಣರು ಶಿವಯೋಗಸಿದ್ಧಿ, ಶಿಷ್ಯವಾತ್ಸಲ್ಯ ಮತ್ತು ಸಾಮಾಜಿಕ ಕಳಕಳಿಯನ್ನು ಹಲವಾರು ವಚನಗಳಲ್ಲಿ ಸ್ಮರಿಸಿದ್ದಾರೆ "ಹರಿದಾಡುವ ಮನವ ನಿಲ್ಲಿಸಿ ಘನವಾಗಿರಿಸಲು" ಗುರುವಿನ ಅನುಗ್ರಹ ಕೋರಿದ್ದಾರೆ. ಪ್ರಾಪಂಚಿಕ ಸುಳಿಗಳಲ್ಲಿ ಸಂಚಲನಗೊಂಡಿರುವ ಮನಸ್ಸನ್ನು ಲಿಂಗಭಕ್ತಿಯ ಏಕಾಗ್ರತೆಯಲ್ಲಿ ಸ್ಥಿರವಾಗಿರಿಸುವಂತೆ ಮೊರೆಯಿಟ್ಟಿದ್ದಾರೆ "ಶಿವನ ನಂಬುಗೆ ಇಲ್ಲದೆ ಮನ ನಿಲ್ಲದಯ್ಯ ಮನ ನಿಲ್ಲದೆ ನಿನ್ನೊಲುಮೆ ಎಂತಯ್ಯಾ ನಿಜ ನಂಬುಗೆ ಇಲ್ಲದೆ ಮನ ನಿಲ್ಲದಯ್ಯ ಎನ್ನುವ ಶರಣರಿಗೆ ಗುರು ಕರುಣೆಯಲ್ಲಿ ಅಪಾರ ನಂಬಿಕೆಯಿದೆ ಆ ನಂಬಿಕೆ ಅವರ ಸಾಧಕ ಜೀವನದ ಸುಳಿಗಳಿಂದ ಅವರನ್ನು ಪಾರುಮಾಡಿದೆ.

ಗುರುಕರುಣೆಗೆ ಜಾತಿ–ಮತ–ಪಂಥ, ಬಡವ–ಬಲ್ಲಿದ, ಸ್ತ್ರೀ–ಪುರುಷರೆಂಬ ತಾರತಮ್ಯಗಳಿಲ್ಲ ಭಕ್ತಿ, ಪ್ರೀತಿ ಸಮರ್ಪಣೆ ವಿನಯ ಗುಣಗಳು ಗುರುಕಾರುಣ್ಯ, ಸಂಪಾದನೆಯ ಮಹಾ ಮಾರ್ಗಗಳೆನ್ನುವುದು ಶರಣರ ನಂಬಿಕೆ ಹುಟ್ಟು–ಸಾವು, ಆಸೆ–ನಿರಾಸೆಗಳ ಪರಿಭ್ರಮಣದಿಂದ ಪಾರು ಮಾಡುವಂತೆ ನಿವೇದಿಸಿಕೊಳ್ಳುವ ವಚನಗಳಲ್ಲಿ ಭವ–ಬಾಧೆಯ ಆವರ್ತನಗತಿಯನ್ನು 'ತೂಗುವ ತೊಟ್ಟಿಲು ಜೀಕುವ ಜೋಕಾಲಿ'ಗೆ ಹೋಲಿಸಿರುವುದು ವಿನೂತನವಾಗಿದೆ. ತೂಗುವ ಕೈಯೊಂದು ಸಕಲ ಜೀವಜಾಲವನ್ನು ನಿಯಂತ್ರಿಸುತ್ತದೆನ್ನುವ ಭಾವ ಗಮನಾರ್ಹ. ಅನುಭಾವದ ಅಂತರಂಗ ವಿದ್ಯೆಗಾಗಿ ಹಂಬಲಿಸುವ ಸಾಧಕ ಜೀವಿಯ ಆತಂಕ ಆತ್ಮ ನಿವೇದನೆಯನ್ನೊಳಗೊಂಡ ಭಾವಪೂರ್ಣ ವಚನಗಳು ಆಧ್ಯಾತ್ಮಿಕ ಹಂಬಲವನ್ನು ಪರಿಣಾಮಕಾರಿಯಾಗಿ ಬಿಂಬಿಸುತ್ತವೆ. ಪರಮಾತ್ಮನನ್ನು 'ನಲ್ಲ'ನಾಗಿ ಆರಾಧಿಸುವ ಮಧುರಭಕ್ತಿಯಲ್ಲಿ ಜೀವಾತ್ಮ ನಲ್ಲೆ ಮಲ್ಲಿಕಾರ್ಜುನನನ್ನು ಗಂಡನಾಗಿ ಆರಾಧಿಸಿದ ಅಕ್ಕಮಹಾದೇವಿ 'ಶರಣ ಸತಿ ಲಿಂಗಪತಿ' ಭಕ್ತಿ ಮಾರ್ಗದ ಸರ್ವಶ್ರೇಷ್ಠ ಮಾದರಿ ಗಂಡನ ಬರುವಿಕೆಗಾಗಿ ಮೈಯೆಲ್ಲ ಕಣ್ಣಾಗಿ ಕಾತರಿಸಿ ಹಂಬಲಿಸಿ ಹಾರೈಸಿ ಪರಿ ಪರಿಯಾಗಿ ಪ್ರೀತಿ ನೀವೇದನೆ ಮಾಡಿಕೊಳ್ಳುವ ಅಕ್ಕನ ವಚನಗಳಲ್ಲಿ ದಾಂಪತ್ಯ ಪ್ರೇಮದ ಶೃಂಗಾರ, ವಿರಹ, ಸರಸ, ವಿರಸಗಳ ಆಕರ್ಷಕ ಪ್ರಪಂಚವಿದೆ, ಭಕ್ತಿಹೃದಯದ ಈ ವಿಶಿಷ್ಟ ಮನಸ್ಥಿತಿಯನ್ನು ಚಿತ್ರಿಸುವ ಅಕ್ಕಮಹಾದೇವಿಯ ವಚನಗಳು "ಕಾಲನ ಕರೆಯ ಬರುವ ಮುನ್ನ" ಒಮ್ಮೆಯಾದರೂ ನಲ್ಲನನ್ನು ದರ್ಶಿಸುವ ಉತ್ಕಟ ಅಪೇಕ್ಷೆಯಿಂದ ಕಾತರಿಸುವ ಜೀವಾತ್ಮನು ನಲ್ಲೆಯ ಭಾವಸ್ಥಿತಿಯನ್ನು ಕಾವ್ಯಮಯ ಶೈಲಿಯಲ್ಲಿ ಹಿಡಿದಿಟ್ಟಿದೆ ಅಹಂಕಾರ ಮಮಕಾರದ

ಕಳೆ–ಕೊಳೆ ಕಿತ್ತೊಗೆದಾಗ ಮಾತ್ರ ಅರಿವಿನ ಅವತರಣವಾಗುವುದು. ಕುಸುಬಿ ಮತ್ತು ಕಡಲೆ ಸಸ್ಯಗಳು ಚಿಗುರನ್ನು ಕತ್ತರಿಸಿದಾಗ ಪಲ್ಲವಿಸಿ ಬೆಳೆವಂತೆ ಮಲ್ಲಿಗೆ ಗುಲಾಬಿಯ ಗಿಡಗಳು ಕತ್ತರಿಸಿದಾಗ ಮೈತುಂಬ ಚಿಗುರೊಡೆಯುವಂತೆ ಪಕ್ವವಾದ ಹಣ್ಣು ತೊಟ್ಟು ಕಳಚಿ ಉದುರುವಂತೆ ಹಮ್ಮು ಬಿಮ್ಮನ್ನು ಕತ್ತರಿಸಿಕೊಂಡ ಪರಿಶುದ್ಧ ಜೀವನ ಪಕ್ವಗೊಂಡು ಪರಮಾತ್ಮನಿಗೆ ಸಮರ್ಪಿತವಾಗುತ್ತದೆ. ಲಿಂಗಭಕ್ತಿ ಧರ್ಮಶ್ರದ್ದೆ ಅನುಭಾವ ಚಿಂತನೆ ವೈಚಾರಿಕ ಅಂತಃಸತ್ವ ಆಧುನಿಕತೆಯ ಇತಿಮಿತಿಗಳನ್ನು ಪುರುಷಕೇಂದ್ರಿತ ಚಿಂತನೆಗಳ ಅಪಾಯಗಳನ್ನು ಅರಿತಿದ್ದಾರೆ, ಹೆಣ್ಣನ್ನು ಕೇಡಿನ ಮೂಲವಾಗಿ ಅಪಮಾನಿಸುತ್ತ ಹೆಣ್ಣಿನ ದೇಹವನ್ನು ಮೈಲಿಗೆಯಾಗಿಸಿರುವ ಸಾಂಪ್ರದಾಯಕ ವಿಚಾರಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಳ್ಳುವ ಶರಣೆಯರು ಸೃಷ್ಟಿಯ ಉಗಮವೆನ್ನುವುದನ್ನು ನೆನಪಿಸುತ್ತ ಹೆಣ್ಣನ್ನು ನೋಡುವ ಕಣ್ಣನ್ನು ಶುದ್ಧಗೊಳಿಸುವಂತೆ ಎಚ್ಚರಿಸಿದ್ದಾರೆ. "ಶಕ್ತಿ ಇರದ ಶಿವನು ಶವನಾದ ಹೆಣ್ಣನ್ನು ಹೀಗಳೆದು ದೂರ ಸರಿಯದೆ ನಿಮ್ಮ ಕಣ್ಣಿನೊಳು ಮಾತೆಯ ಮಮತೆಯನು ತುಂಬಿ ಕೊಳ್ಳಿರಿ ಪರಂಪರೆಯ ಶ್ರೇಷ್ಟ ಅಂಶಗಳನ್ನು ವೈಜ್ಞಾನಿಕ ಆವಿಷ್ಕಾರಗಳನ್ನು ಮನುಕುಲದ ಪ್ರಗತಿಗೆ ಪೂರಕ ಎಂದಿದ್ದಾರೆ. ವಿಷಯ ಸುಖದ ಆಕರ್ಷಣೆಯಲ್ಲಿ ಆತ್ಮತತ್ವವನ್ನು ಅಂತರಂಗದ ಬೆಳಕನ್ನು ಕಳೆದುಕೊಳ್ಳುತ್ತಿರುವುದಕ್ಕೆ ವಿಷಾದಿಸಿದ್ದಾರೆ". ಮಾತು ಮನಸ್ಸು, ನಡೆ, ನುಡಿ, ಆಚಾರ, ವಿಚಾರ ಭಿನ್ನವಾದ ಇಬ್ಬಂದಿತನವನ್ನು ಕಂಡು ಕೊರಗಿದ್ದಾರೆ. ಸ್ವಾರ್ಥ–ವಂಚನೆ–ಕುಟಿಲತನದ ವಿಜೃಂಭಣೆ ಮತ್ತು ದ್ವಿಮುಖ ವ್ಯಕ್ತಿತ್ವದ ಸೋಗಲಾಡಿತನಕ್ಕಾಗಿ ಹಳಹಳಿಸುವ ಸಾಮಾಜಿಕ ಸಂಸ್ಕೃತಿಯ ಅಂಧಾನುಕರಣೆಯ ಅಪಾಯಗಳನ್ನು ಗುರುತಿಸಿದ ಶಿವಶರಣೆಯರು ಶ್ರಮ ಸಂಸ್ಕೃತಿಯನ್ನು ಭೋಗ ಸಂಸ್ಕೃತಿಯಾಗಿ ಪರಿವರ್ತನೆಗೊಳ್ಳುತ್ತಿರುವುದಕ್ಕೆ ವಿಷಾದಿಸುತ್ತಾರೆ. ಆಧುನಿಕತೆಯು ಯಾಂತ್ರೀಕರಣದ ಫಲವಾಗಿ ದೇಹ ದುಡಿಮೆಯು ಅಪಮೌಲ್ಯಗೊಳ್ಳುತ್ತಲಿದ್ದು ಕೃಷಿ ಕೈಕಸುಬುಗಳು ವೃತ್ತಿ ಕೌಶಲ್ಯಗಳು ಮೂಲೆ ಗುಂಪಾಗುತ್ತಿವೆ. ಕೈಕೆಸರಾಗದೆ ಬಾಯಿ ಮೊಸರಾಗಿಸಿಕೊಳ್ಳುವ ಪಾಶ್ಚಾತ್ಯ ನೀತಿಯ ಪ್ರಭಾವದಲ್ಲಿ ಬುದ್ಧಿ ಮತ್ತು ದುಡಿಮೆಯ ಸಾಂಗತ್ಯ ತಪ್ಪಿ ಹೋಗಿದೆ, ವಿದ್ಯೆಯಿರುವ ಪಟ್ಟಣಿಗರಲ್ಲಿ ದುಡಿಮೆಯ ಪ್ರವೃತ್ತಿ ಕರಗುತ್ತ ಶ್ರಮರಹಿತ ಸಂಪಾದನೆಯ ಅಪೇಕ್ಷೆ ಹೆಚ್ಚುತ್ತಿದೆ, ನಾಗರಿಕ ಸೌಲಭ್ಯಗಳಿಲ್ಲದ ಅಸಂಖ್ಯಾತ ಹಳ್ಳಿಗರು ವಿದ್ಯೆಯುಳ್ಳ ಪಟ್ಟಣಿಗರ ಶೋಷಣೆ ತಂತ್ರಗಳಿಗೆ ಬಲಿಪಶುಗಳಾಗಿದ್ದಾರೆ. ಹೀಗೆ ವಿದ್ಯೆ ಮತ್ತು ದುಡಿಮೆಯ ತಾಳ ಮೇಳವಿಲ್ಲದ ಬಿರುಕು ಸಂಸ್ಕೃತಿಯ ಭರದಲ್ಲಿ ನರಳುತ್ತಿರುವ ಭಾರತೀಯರಲ್ಲಿ ವೃತ್ತಿಗೌರವದ ಭಾವನೆ ಜಾಗೃತಗೊಳ್ಳಬೇಕು. ವಿದ್ಯೆ–ದುಡಿಮೆ–ಸಂಪತ್ತು ಸರಿಸಮವಾಗಿ ಹಂಚಿಕೆಯಾಗಬೇಕೆನ್ನುವ ಆಶಯವು ಆಧುನಿಕ ಜನರ ದ್ವಂದ್ವ ವಾಸ್ತವವನ್ನು ಎತ್ತಿ ತೋರಿಸಿದೆ. ಅರಿವು ಮತ್ತು ಆಚಾರಶುದ್ಧಿ ಸಾಮರಸ್ಯ ಸಮಷ್ಟಿಯ ಕಾಳಜಿಯನ್ನು ವಚನಗಳಲ್ಲಿ ಎತ್ತಿ ತೋರಿಸಿದ್ದಾರೆ. ಸ್ವಾರ್ಥ–ಪ್ರತಿಷ್ಠೆ–ಸ್ವಜನ ಪಕ್ಷಪಾತಗಳಲ್ಲಿ ಧರ್ಮದ ಉದಾತ್ತ ಮೌಲ್ಯಗಳು ಮಾಯವಾಗುತ್ತಿರುವುದಕ್ಕಾಗಿ ವಿಷಾದಿಸುತ್ತಾ ಅನ್ಯಧರ್ಮಗಳಲ್ಲಿರುವ ಅನುಕರಣೀಯ ಸಂಗತಿಗಳ ಹಿನ್ನೆಲೆಯಲ್ಲಿ ಸ್ವಧರ್ಮದ ಸಂಗತಿಯನ್ನು ವಸ್ತುನಿಷ್ಠವಾಗಿ ಪರಾಮರ್ಶಿಸುತ್ತಾ ಆತ್ಮವಿಮರ್ಶೆಗೆ ತೊಡಗಿ ಸಮಾಜದ ಸಮಕಾಲೀನ ಸಾಮಾಜಿಕ, ಧಾರ್ಮಿಕ ಪರಿಸರದ ಅನಾರೋಗ್ಯಕರ ವಿದ್ಯಮಾನಗಳನ್ನು ವಸ್ತುನಿಷ್ಠವಾಗಿ ವಿಮರ್ಶಿಸಿಕೊಳ್ಳುವ ವೈಚಾರಿಕ ಎಚ್ಚರವನ್ನು ಕಾಯ್ದುಕೊಂಡಿದ್ದಾರೆನ್ನುವುದು ಗಮನಾರ್ಹ ಸಂಗತಿ. ಮೌಢ್ಯವನ್ನು ಪೋಷಿಸುತ್ತ ಸ್ವಾರ್ಥ ಸಾಧನೆಯಲ್ಲಿ ಆಸಕ್ತರಾಗಿರುವ ಗುರು–ಹಿರಿಯರ ಆಷಾಢಭೂತಿತನವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ, ಸ್ವಪ್ರತಿಷ್ಠೆಗಾಗಿ ಅಡ್ಡಪಲ್ಲಕ್ಕಿ ಉದ್ದಪಲ್ಲಕ್ಕಿಯಲ್ಲಿ ಕುಳಿತು ಮುಗ್ಧಭಕ್ತರ ಹೆಗಲೇರಿ ಮೆರೆಯುವ ಗುರು–ವಿರಕ್ತರಿಗೆ ಶರಣರು ಹೇಳುವ

ಕಿವಿಮಾತು ಅವರ ನಿರ್ಭಿತ ವ್ಯಕ್ತಿತ್ವ ಮತ್ತು ಹರಿತವಾದ ವಚನಗಳೇ ನಿದರ್ಶನಗಳಾಗಿವೆ.

ಜೀವನಾನುಭವದ ವಿಭಿನ್ನ ವಿನ್ಯಾಸಗಳನ್ನು ಆತ್ಮ ವಿಮರ್ಶೆಯ ವಿವೇಕವನ್ನು ಆಧ್ಯಾತ್ಮ ಸಾಧನೆಯ ಉತ್ಕಟ ಭಾವಾನುಭಾವಗಳನ್ನು ಸುಪರಿಚಿತ ವಸ್ತು ಸಂಗತಿಗಳ ಮೂಲಕ ವಚನಗಳನ್ನಾಗಿಸಿರುವ ಶರಣರು ಜೀವನಾನುಭವದ ಸಂಕೀರ್ಣ ವಿವರಗಳನ್ನು ಅನುಭಾವದ ನಿಗೂಢ ನೆಲೆಗಳನ್ನು ಭಾಷೆಯ ಮಿತ ಮಾಧ್ಯಮದಲ್ಲಿ ಮೂರ್ತಗೊಳಿಸುವ ವಚನಗಳ ಸಾಂಕೇತಿಕ ಪರಿಭಾಷೆ, ಭಾವ ಸಂಕೀರ್ಣತೆ, ಪ್ರತಿಮೆ ಪ್ರತೀಕ ಅನನ್ಯ ರಚನೆಗಳು, ಸುಲಭ ಸಂವಹನಕ್ಕೆ ಭಾಷೆ ಮತ್ತು ಅರ್ಥ ಸಂದಿಗ್ಧತೆಯಲ್ಲಿ ಅರಳಿಕೊಳ್ಳುವ ವಿಶೇಷಾರ್ಥದ ನೆಲೆಗಳು ಸಾಮಾನ್ಯ ಓದುಗರಿಗೆ ನಿಲುಕುವಂತಹುದಲ್ಲ. ಶರಣರು ಸಾಧಕರೂ ಆಗಿರುವುದರಿಂದ ಅನುಭಾವ ಸಾಧನೆಯ ಆತಂಕ ತೊಳಲಾಟ ಇಷ್ಟಲಿಂಗ ಭಕ್ತಿ, ಆಧ್ಯಾತ್ಮ ಸಾಧನೆಯ ತೃಪ್ತಿ ವಚನಗಳ ಅನುಭವಲೋಕವನ್ನು ಕಟ್ಟಿಕೊಟ್ಟಿವೆ. “ಹಮ್ಮು ಹರಿವನಕ ಹರ ದೊರೆಯನಯ್ಯ ಹಮ್ಮು ಹರಿವನಕ ಇಂಬುಗೊಡೆ ನೀನು” ಎನ್ನುವ ಆತ್ಮ ವಿಮರ್ಶೆ ಅಣುರೇಣು ತೃಣದೊಳಗಿರುವವನು ನನ್ನೊಳಗೆ ಇರದಿಹನೇ?” ಎನ್ನುವ ಆತ್ಮ ಜಿಜ್ಞಾಸೆ ಬೆರೆದು ಬೇರಿಲ್ಲದಂತಿವುದೆಂದಿಗಯ್ಯ?” ಎನ್ನುವ ಸಮರಸದ ತವಕ “ಸಂಸಾರಿ ಶರಣನೆನಿಸುವನಯ್ಯ” ಎನ್ನುವ ಇಹ–ಪರ ಸಮನ್ವಯ ಶ್ರದ್ಧೆ ವಚನ ಸಾಹಿತ್ಯದ ಅಧ್ಯಯನ ಅನುಸಂಧಾನದ ಪರಿಶ್ರಮವಿರುವ ಧರ್ಮ ಮತ್ತು ಅನುಭಾವದ ಸೂಕ್ಷ್ಮ ಸೆಳಕುಗಳು ಮಿಂಚುತ್ತವೆ. ಶಿವಶರಣರ ಶಿವಶಕ್ತಿ ಸಂಯೋಗದಲ್ಲಿ ಸೃಷ್ಠಿಯ ಉತ್ಪತ್ತಿ ಶಿವಶಕ್ತಿಯ ಸಮ್ಮಿಲನದಲ್ಲಿ ಪರಶಿವನ ಅಸ್ತಿತ್ವ ಎನ್ನುವ ತಾತ್ವಿಕ ವಿಚಾರಗಳು ಕಂಡುಬರುತ್ತವೆ. ಗುರುಕೊಟ್ಟ ಇಷ್ಟಲಿಂಗವು ಅರಿವಿನ ಕುರುಹು ಆತ್ಮಲಿಂಗವು ಭಾವಲಿಂಗದ ಕಳೆ ಎನ್ನುವ ತಾತ್ವಿಕ ಚರ್ಚೆ ಅಲ್ಲಲ್ಲಿ ಕಂಡುಬರುತ್ತದೆ. ಭಾರತದ ಸಾಂಸ್ಕೃತಿಕ ಹಿರಿಮೆಯಲ್ಲಿ ಆಧ್ಯಾತ್ಮಿಕ ಸತ್ವ ಮತ್ತು ನೈತಿಕ ಶಕ್ತಿಯಲ್ಲಿ ಅಪಾರ ವಿಶ್ವಾಸವುಳ್ಳ ವರ್ತಮಾನದ ಮೌಲ್ಯ ಪತನವನ್ನು ಕಂಡು ನೊಂದಿದ್ದಾರೆ. ಭಾರತದ ಆಧ್ಯಾತ್ಮಿಕ ಚೈತನ್ಯ ಕಳಾಹೀನವಾಗುತ್ತಿದೆ. ಆತ್ಮಶಕ್ತಿ ಮಂಕಾಗುತ್ತಿದೆ. ಎನ್ನುವ ಕೊರಗು ಶೋಷಿತ ಜನ ಸಮುದಾಯದ ಉದ್ದಾರದ ಕಳಕಳಿ ನೈತಿಕ ಶುದ್ಧಿ ಮತ್ತು ಮಾನವತಾವಾದಿ ಆಲೋಚನಾ ವಿಧಾನ ಪ್ರಗತಿ–ಪರಂಪರೆಯಲ್ಲಿ ದೇಹ–ಭಾವದ ಪ್ರಾಕೃತಿಕತೆ ಮತ್ತು ಪ್ರಾಪಂಚಿಕತೆಯ ತೊಳಲಾಟದಲ್ಲಿ ಅಂತರಾತ್ಮನನ್ನು ಕಾಣಲಾಗದೆ ದೀನವಾಗಿ ಮೊರೆಯಿಡುವ ಜೀವಾತ್ಮದ ಸಂಕಟ ಹಲವಾರು ವಚನಗಳಲ್ಲಿ ನಿರೂಪಿತವಾಗಿದೆ. ಅಹಂ ನಿರಸನದಲ್ಲಿ ಅನುಭಾವ ಸಾಧ್ಯ. ಭಕ್ತಿಯೆನ್ನುವುದು ಕೊಂಡುಕೊಳ್ಳುವ ವ್ಯವಹಾರವಲ್ಲ ಗುರುಕೃಪೆಯಿಂದ ಸರ್ವಾರ್ಪಣ ಭಕ್ತಿ ಮತ್ತು ಅಚಲ ನಿಷ್ಠೆಯಿಂದ ದೇವನೊಲುಮೆ ಸಾಧ್ಯವೆನ್ನುವ ವಿಚಾರಗಳನ್ನು ಬಿಂಬಿಸುವ ವಚನಗಳು ಭಾಷೆ, ರೂಪ, ವಿನ್ಯಾಸ, ಅರ್ಥವೃತ್ತಿಯ ಸತ್ವದಲ್ಲಿ ಬಸವಾದಿ ಶಿವಶರಣೆಯರು ಪರಮಾತ್ಮನ ಸೃಷ್ಠಿಯಲ್ಲಿ ಸತ್ಯ ಶಿವ ಸೌಂದರ್ಯದ ತತ್ವವಿದೆ. ಭೂಮಿ ಭಾನು ಸಮುದ್ರ ಕಾಡು ಬೆಟ್ಟ ಗುಡ್ಡಗಳೆಲ್ಲವೂ ಭಗವಂತನ ಭವ್ಯತೆ ರೌದ್ರತೆಯ ವಿರಾಟ್ ಸ್ವರೂಪವನ್ನು ಸಂಕೇತಿಸುತ್ತವೆ. ಪಂಚಭೂತಗಳಲ್ಲಿ ಪರಮಾತ್ಮ ತತ್ವವಿದೆ ಇದನ್ನು ಅನುಭವಿಸಿ ಆನಂದಿಸುವಲ್ಲಿಯೇ ಮಾನವ ಜನ್ಮದ ಸಾರ್ಥಕ್ಯವಿದೆ.

ಸ್ತ್ರೀ ಸ್ವಾತಂತ್ರ್ಯ ಸಮಾನತೆಯ ವಿಚಾರಗಳು ಜೀವವಿರೋಧಿಯಾಗದೆ ವ್ಯಕ್ತಿ ಮತ್ತು ಸಮಾಜದ ಅಂತಃಶಕ್ತಿಯನ್ನುಸಂವರ್ಧಿಸುವ ಸೇತುವೆಗಳಾಗಬೇಕು “ತನ್ನ ತಾನರಿದು ತಾನೇ ತಾನಾದವ ಸರ್ವಸ್ವತಂತ್ರನಯ್ಯ ತನುವ ಹೊಲಿಗೆ ಬಿಚ್ಚಿ ಮನದ ಮೈಲಿಗೆ ಕಳೆದು ಕೊಳ್ಳುವುದೇ ನಿಜವಾದ ಸ್ವಾತಂತ್ರ್ಯ” ಎನ್ನುವ ವಿಚಾರಗಳು ಲೌಕಿಕ ಸ್ವಾತಂತ್ರ್ಯದ ಸೀಮೆಯನ್ನು ‘ಆತ್ಮ’ ಸ್ವಾತಂತ್ರ್ಯದ ಉನ್ನತ ನೆಲೆಗೆ ತಲುಪಿಸುತ್ತವೆ, ಪುರುಷ ಕೇಂದ್ರಿತ ಸಾಮಾಜಿಕ ವಿನ್ಯಾಸದಲ್ಲಿ ಒಳ–ಹೊರಗಿನ ಹೊಣೆಗಾರಿಕೆಗಳಲ್ಲಿ ಘಾಸಿಗೊಳ್ಳುತ್ತಿರುವ ಮಹಿಳೆಯರ ಶೋಷಣೆ ಕುರಿತು

ಅನೇಕ ವಚನಗಳಲ್ಲಿ ತೀವ್ರವಾಗಿ ಪ್ರತಿಕ್ರಿಯಿಸಿದ್ದಾರೆ, ಸ್ತ್ರೀಯರು ಕುಟುಂಬದಾಚೆಯ ಪ್ರಪಂಚದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುತ್ತಿರುವುದರಿಂದ ಹೆಣ್ಣಿನ ಬದುಕಿನ ಆಯಾಮಗಳು ವಿಸ್ತರಿಸಿವೆ. ಅದಕ್ಕೆ ಅನುಗುಣವಾಗಿ ಕೌಟುಂಬಿಕ ಸಾಮಾಜಿಕ ರಚನೆಗಳು ಬದಲಾಗುತ್ತಿಲ್ಲ. ಹೊರಗೆ ದುಡಿಯುವ ಹೆಣ್ಣು ಕುಟುಂಬದಲ್ಲಿ ಸಾಂಪ್ರದಾಯಿಕ ಸತಿತ್ವ ಮತ್ತು ಮಾತೃತ್ವದ ಎಲ್ಲ ಹೊಣೆಗಳನ್ನೂ ನಿಭಾಯಿಸಲೇ ಬೇಕಾದ ಒತ್ತಡದಲ್ಲಿ ತೊಳಲಾಡುತ್ತಿದ್ದಾಳೆ. ಸಂಪ್ರದಾಯ ಪ್ರಿಯತೆಯಿಂದಾಗಿ ಹುಟ್ಟಿಕೊಳ್ಳುವ ಆರ್ಥಿಕ ಕೌಟುಂಬಿಕ ಸಮಸ್ಯೆಗಳನ್ನು ಮಾನವತಾವಾದಿ ಧೋರಣೆಗಳಿಂದ ಮಾತ್ರ ಕೊನೆಗಾಣಿಸಬಹುದೆನ್ನುವ ನಿರೀಕ್ಷೆಯಲ್ಲಿ ಅವರ ಸ್ತ್ರೀಪರ ಚಿಂತನೆಯ ನೆಲೆಯಿದೆ. ವಿಧವೆಯ ಬವಣೆಗಳನ್ನು ನೋವಿನಿಂದ ನಿರೀಕ್ಷಿಸಿದ್ದಾರೆ, ಹೆಣ್ಣನ್ನು ದೇವತೆಯೆಂದು ಸಾರುತ್ತಲೇ ಅವಳನ್ನು ಗುಲಾಮಳಾಗಿಸಿದ ವ್ಯವಸ್ಥೆಯ ಕೌರ್ಯವನ್ನು ನೆನಪಿಸುತ್ತ ಅವಳನ್ನು ಮಾನವಳನ್ನಾಗಿ ಕಂಡು ಮಾನವೀಯತೆ ತೋರಿದರೆ ಸಾಕು ಎಂದು ಕವಿಮಾತು ಹೇಳಿದ್ದಾರೆ. ವಾಣಿಜ್ಯ ಸಂಸ್ಕೃತಿಯಲ್ಲಿ ಮಾನವನ ಘನತೆ ಕಣ್ಮರೆಯಾಗಿ ದುಡ್ಡು ದೊಡ್ಡಪ್ಪನಾಗಿ ವಿಜೃಂಬಿಸಿದೆ. ಹಣ ಸಂಪಾದನೆಯ ಅಡ್ಡ ದಾರಿಗಳು ಮನುಷ್ಯರ ಆತ್ಮ ಸಾಕ್ಷಿಯನ್ನು ಹೊಸಕಿಹಾಕಿವೆ. ಬಸವಣ್ಣನಂತಹ ನಿಸ್ಪೃಹ ನ್ಯಾಯನಿಷ್ಟುರ ಪ್ರಾಮಾಣಿಕ ಮಂತ್ರಿಗಳಿದ್ದ ದೇಶದಲ್ಲಿ ಇಂದು ಭ್ರಷ್ಟಾಚಾರಕ್ಕೆ ಕಳಸದಂತಿರುವ ರಾಜಕಾರಣಿಗಳು ದೇಶವನ್ನೇ ದುಡ್ಡಿಗಾಗಿ ಮಾರುವುದನ್ನು ಖಾರವಾಗಿ ಟೀಕಿಸಿರುವಲ್ಲಿ ಅವರ ಸಾಮಾಜಿಕ ಕಾಳಜಿ ಇದೆ. ಜಾಗತೀಕರಣದ ಯಾಂತ್ರೀಕರಣದಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಬಡತನ ರೈತರ ಹತಾಸೆ ವ್ಯಾಪಾರಸ್ಥರ ವಂಚನೆ ದುಡಿವ ವರ್ಗದವರ ಗೋಳು ಸ್ವಾರ್ಥ ಸಂಸ್ಕೃತಿಯ ವಿನಾಶಗಳಿಗಾಗಿ ಕಳವಳಿಸಿದ್ದಾರೆ "ಹಣ ಹಣ ಹಣವೆನುತಿಹರಯ್ಯ ಹಣದ ಹೊಳೆ ಹರಿದರೂ ಸಾಲದಾಗಿದೆ. ನೋಡಾ ದುಶ್ಚಟಕೆ ಅನೀತಿಗೆ ಎಂದು ಹಳ್ಳಿಯಿಂದ ದಿಲ್ಲಿಯವರೆಗೆ ಹರಿಯುತ್ತಿರುವ ಭ್ರಷ್ಟತನವನ್ನು ತೀಕ್ಷ್ಣವಾಗಿ ಖಂಡಿಸಿದ್ದಾರೆ.

ಆಧುನಿಕತೆಯ ಕೊಡುಗೆಯಾಗಿರುವ ವೈಜ್ಞಾನಿಕ ಆವಿಷ್ಕಾರಗಳು ಸ್ತ್ರೀ ಸಂಸ್ಕೃತಿಯ ಸ್ವರೂಪವನ್ನು ವೇಗವಾಗಿ ಪ್ರಭಾವಿಸುತ್ತಿರುವುದನ್ನು ಗುರುತಿಸುವ ವಚನಕಾರರು ಸ್ತ್ರೀಧರ್ಮದ ಸ್ಥಾಪಿತ ಗ್ರಹಿಕೆಗಳನ್ನು ಬದಲಾಯಿಸುತ್ತಿರುವುದಕ್ಕಾಗಿ ಅಸಮಾಧಾನಗೊಂಡಿದ್ದಾರೆ. ಆದರ್ಶ ಗೃಹಿಣಿ ತ್ಯಾಗಮಯಿ ತಾಯಿ ಕುಟುಂಬಿನಿಯರ ಅನಿವಾರ್ಯತೆಯನ್ನು ಮನಗಂಡಿರುವ ಅವರು ಆಧುನಿಕತೆಯ ಜೀವವಿರೋಧಿ ಆಯಾಮಗಳ ಬಗೆಗೆ ನೀಡುವ ಎಚ್ಚರಿಕೆ ಮನನೀಯವಾಗಿದೆ. ವಚನಕಾರರ ಚಿಂತನಶೀಲ ಪ್ರವೃತ್ತಿ ಎದ್ದು ಕಾಣುತ್ತಿದ್ದು ಎಲ್ಲೆಲ್ಲಿಯೂ ಸಲ್ಲುವಂತಾಗಬೇಕೆನ್ನುವ ಶರಣರ ಜೀವನ ಶ್ರದ್ದೆ ಅಂತರಂಗದ ಶುದ್ಧಿ ಬಹಿರಂಗದ ಬದುಕು ಭವ್ಯವಾಗಬೇಕು. ಭಾವಶುದ್ಧಿ ಆಚಾರ, ವಿಚಾರ ಶುದ್ಧಿಯಿಂದ ಕೂಡಿದ ಬಾಳುವೆ ಪಾರಮಾರ್ಥ ಸಾಧನೆಯಷ್ಟೇ ಶ್ರೇಷ್ಠವಾದುದು. ಆತ್ಮತೃಪ್ತಿಯೇ ಇಹ–ಪರದ ಸರ್ವೋನ್ನತ ಸಂಪತ್ತೇನ್ನುವ ಜೀವನ ಪ್ರೀತಿಯಲ್ಲಿ ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಯ್ಯ ಎನ್ನುವ ಶರಣರ ಜೀವನ ನಿಷ್ಠೆಯ ಅನುಸರಣವಿದೆ.

ವಚನಗಳನ್ನು ಸಾಹಿತ್ಯಿಕವಾಗಿ ಅಧ್ಯಯನ ಮಾಡುವಾಗ ಒಂದು ಮಾತನ್ನು ಅಗತ್ಯವಾಗಿ ನೆನಪಿಸಿಕೊಳ್ಳ ಬೇಕಾಗುತ್ತದೆ. ಅವುಗಳನ್ನು ಕೇವಲ ಧರ್ಮಶಾಸ್ತ್ರಗಳ ಕೃತಿಗಳೆಂದು ಕರೆಯುತ್ತಿದ್ದ ಕಾಲದಿಂದ ಹಿಡಿದು ಇಂದು ಜಗತ್ತಿನ ಶ್ರೇಷ್ಟ ಸಾಹಿತ್ಯ ಕೃತಿಗಳೆನ್ನುವವರೆಗೆ ಅವುಗಳ ಅಧ್ಯಯನ ಸಾಗಿ ಬಂದಿದೆ. ಈ ನಡುವೆ ವಚನಗಳನ್ನು ಸಾಹಿತ್ಯ ದೃಷ್ಟಿಯಿಂದಲ್ಲದೆ ಅನೇಕ ಮುಖಗಳಲ್ಲಿ ಅಂದರೆ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಚಾರಿತ್ರಿಕ, ಭಾಷಿಕ ಅಧ್ಯಯನದ ಆಕರಗಳೆಂದು ಅವಲೋಕಿಸುವ ಪ್ರಯತ್ನಗಳು ನಡೆಯುತ್ತಿದ್ದು ವ್ಯಕ್ತಿಯ ಅಂತರಂಗದ ಆಣವ, ಮಾಯಾ, ಕಾರ್ಮಿಕ, ಮಲಗಳಂತೆ

ಬಹಿರಂಗದ ವರ್ಣ, ವರ್ಗ, ಲಿಂಗಭೇದಗಳಂತಹ ಮಲತ್ರಯಗಳನ್ನು ನೀಗಿಕೊಳ್ಳುವುದಕ್ಕೆ ಅಂತರಂಗ ಬಹಿರಂಗದ ಶುದ್ಧಿಗೆ ವಿಶೇಷ ಮಹತ್ವವನ್ನು ನೀಡಿರುವುದು ಈ ಶುದ್ಧಿ ವ್ಯಷ್ಟಿ ಸಮಷ್ಟಿ ಎರಡರಲ್ಲೂ ಏಕಕಾಲಕ್ಕೆ ನಡೆಯಬೇಕೆಂಬುದು ಅವರ ವಿಚಾರವಾಗಿದೆ. ಸಾವಿರಾರು ವರ್ಷಗಳಿಂದ ಬೇರೂರಿದ ವರ್ಣವ್ಯವಸ್ಥೆಯನ್ನು ಧಿಕ್ಕರಿಸಿ ಜಾತ್ಯಾತೀತವಾದ ಸಮಾಜವನ್ನು ನಿರ್ಮಿಸಲು ಹಂಬಲಿಸಿದರು. ಧರ್ಮದ ಹೆಸರಿನಲ್ಲಿ ತುಂಬಿಕೊಂಡಿದ್ದ ವಾಮಾಚಾರಗಳನ್ನು ಖಂಡಿಸಿ ಶುದ್ಧ ಭಕ್ತಿಯನ್ನು ಎತ್ತಿ ಹಿಡಿದರು. ಇಲ್ಲಿನ ಬದುಕು ಪರಿಶುದ್ಧವಾಗಿ ಸುಂದರಗೊಳ್ಳುವ ಮೂಲಕ ಪಾರಲೌಕಿಕ ಉನ್ನತಿ ಸಾಧ್ಯ ಎಂಬುದನ್ನು ಪ್ರತಿಪಾದಿಸಿ ಧರ್ಮ ತತ್ವಗಳಿಗೆ ಹೊಸ ಅರ್ಥವನ್ನು ಕೊಟ್ಟರು. ಪ್ರತಿಯೊಬ್ಬ ಜೀವಿಯು ಅನ್ಯರ ಅನ್ನದ ಹಂಗಿನ್ನಲ್ಲಿ ಬದುಕದೆ ನಿಜವಾದ ಸತ್ಯಶುದ್ಧ ಕಾಯಕದಿಂದ ಬಾಳಬೇಕೆಂಬುದನ್ನು ಹೇಳಿ ವ್ಯಕ್ತಿ ಸ್ವಾತಂತ್ರ್ಯವನ್ನು ನಿಜವಾದ ಅರ್ಥದಲ್ಲಿ ತಂದುಕೊಡಲು ಮುಂದಾದರು. ಹೀಗೆ ಅಂದಿನ ಆಂದೋಲನ ವ್ಯಕ್ತಿಯ ಲೌಕಿಕ ಪಾರಲೌಕಿಕ ಸ್ತರಗಳಿಗೂ ವ್ಯಾಪಿಸಿರುವುದನ್ನು ವಚನಗಳಲ್ಲಿ ಕಾಣಬಹುದಾಗಿದೆ. ವಚನಗಳಲ್ಲಿ ಹುದುಗಿರುವ ಈ ದೃಷ್ಟಿಯ ಅಂಶಗಳನ್ನು ಸಾಹಿತ್ಯಿಕ ಸ್ವರೂಪದಲ್ಲಿ ಅಭಿವ್ಯಕ್ತಿಯನ್ನು ಪಡೆದಿರುವುದರಿಂದ ಅವು ಅದೇ ರೀತಿಯ ಪರಿಶೀಲನೆಗೆ ಒತ್ತಾಯಿಸುತ್ತವೆ.

'ಜಂಗಮ' ಎಂಬುದಕ್ಕೆ ಚಲನಶೀಲ ಚೈತನ್ಯಶೀಲ, ಪವಿತ್ರ, ಪರಿಶುದ್ಧ ಎಂಬರ್ಥಗಳಿದ್ದು ಜೀವ ಜಗತ್ತು ಪರಿಶುದ್ಧ ಸ್ಥಿತಿಯಲ್ಲಿರುವುದೇ ಜಂಗಮ ಅದು ಮಲತ್ರಯಗಳ ಸಂಪರ್ಕದಿಂದ ಸ್ಥಾವರವಾದಾಗ ಅದನ್ನು ಮಲರಹಿತವಾಗಿ ನಿಲ್ಲಿಸುವುದೇ ಜಂಗಮತ್ವದ ಗುರಿ ಎಂದು ತಿಳಿಯುತ್ತದೆ. ಇವುಗಳಲ್ಲದೆ ಬಸವಣ್ಣನವರು ಹುಟ್ಟಿನೊಡನೆ ಬರುವ ಹೊಲೆತನ ಜಾತಿ ಶ್ರೇಷ್ಟತೆಯ ಖಂಡನೆ ಬದುಕಿನಲ್ಲಿ ಯಾವುದು ಉನ್ನತವಾದದ್ದು ಮುಂತಾದವುಗಳ ಬಗ್ಗೆ ಅತ್ಯಂತ ಮೂಲಭೂತವಾದ ಪ್ರಶ್ನೆಗಳನ್ನು ಎತ್ತಿ ಸಮಗ್ರ ಬದುಕಿಗೆ ಚಲನಶೀಲತೆಯನ್ನು ತಂದುಕೊಡಲು ಪ್ರಯತ್ನಿಸಿದ್ದಾರೆ, ಉಳ್ಳವರು ಶಿವಾಲಯವ ಮಾಡುವರು ಎಂಬ ಮಾತಿನ್ನಲ್ಲಿ ಬಸವಣ್ಣನವರು ದೇವಾಲಯ ಸಂಸ್ಕೃತಿಯನ್ನು ತಿರಸ್ಕರಿಸಿ ಇಷ್ಟಲಿಂಗಧಾರಣೆಯಿಂದ ಪ್ರತಿ ವ್ಯಕ್ತಿ ದೇವಾಲಯವಾಗಬೇಕೆಂಬ ಕನಸು ಕಂಡಿರುವುದಕ್ಕೆ ಭಾವಾನುಭಕ್ತಿಯೇ ಕಾರಣ ಎನ್ನುವುದನ್ನು ಗಮನಿಸಬಹುದಾಗಿದೆ. ಜೇಡರ ದಾಸಿಮಯ್ಯನ ನಡುವೆ ಸುಳಿವಾತ್ಮ ಗಂಡೂ ಅಲ್ಲ ಹೆಣ್ಣು ಅಲ್ಲ ಎಂಬ ಲಿಂಗ ಭೇದರಹಿತ ಮುಕ್ತ ಚಿಂತನೆಯ ತಳಹದಿ ಯಾವುದೇ ಕಾಲದ ಬದುಕಿನ ಧೋರಣೆಗಳು ಅಂದಂದಿನ ಸಾಹಿತ್ಯದ ವಸ್ತುವಿನ ಆಯ್ಕೆಗೆ ಕಾರಣವಾಗುವಂತೆ ಅದರಿಂದ ಅಭಿವ್ಯಕ್ತಿಯನ್ನು ಪಡೆದ ಅದರ ರೂಪಕ್ಕೆ ಕಾರಣವಾಗುತ್ತವೆ. ವಚನಕಾರರ ಜೀವನಶೈಲಿ, ದೃಷ್ಟಿ ಧೋರಣೆಗಳೇ ಭಿನ್ನವಾದ್ದರಿಂದ ಅವರ ಬದುಕಿನ ತಿರುಳಿನಿಂದ ಅಭಿವ್ಯಕ್ತಿ ಪಡೆದ ರೂಪ ಬೇರೆಯಾಗುವುದು ಅನಿವಾರ್ಯವಾಯಿತು. ಮುಖ್ಯವಾಗಿ ವಚನಕಾರರ ಬದುಕಿನ ತಳಹದಿ "ಕಾಯಕ"ವಾದ್ದರಿಂದ ಅನ್ನದ ದೈನ್ಯತೆಗಾಗಿ "ಜೋಳದಪಾಳಿ" ನೆನೆದು ಯಾರ ಮುಂದೆಯೂ ತಲೆಬಾಗುವ ಅಥವಾ ಆಶ್ರಯಿಸುವ ಸಂದರ್ಭ ಬರಲಿಲ್ಲವಷ್ಟೇ ಅಲ್ಲ; ವ್ಯಕ್ತಿ ಸ್ವಾತಂತ್ರ್ಯವನ್ನು ಅದರ ಪೂರ್ವ ಅರ್ಥದಲ್ಲಿ ಅನುಭವಿಸಲು ಸಾಧ್ಯವಾಯಿತು. ವಚನಕಾರರು ಮುಖ್ಯವಾಗಿ ಸಮಾಜೋಧಾರ್ಮಿಕ ಚಳವಳಿಯಾದ್ದರಿಂದ ಅದಕ್ಕೆ ಅಗತ್ಯವಾದ ರೂಪವನ್ನು ಕಂಡುಕೊಳ್ಳುವುದು ಅವರಿಗೆ ಅವಶ್ಯವಾಯಿತು. ಅದು ತನ್ನ ತಿರುಳಿನಲ್ಲಿ ವರ್ಣ, ವರ್ಗ, ಲಿಂಗಭೇದಗಳನ್ನು ವಿರೋಧಿಸಿದ್ದರಿಂದ ಸಹಜವಾಗಿಯೇ ಅದಕ್ಕೆ ಜಂಗಮ ಗುಣವು ಪ್ರಾಪ್ತವಾಯಿತು. 'ವರ್ಣಭೇದ' ಶರಣರ ದೃಷ್ಠಿಯಲ್ಲಿ ಎರಡೇ ಕುಲಗಳು ಒಂದು ಭಕ್ತರದು ಇನ್ನೊಂದು ಭವಿಗಳದು ವರ್ಗಭೇದ ವರ್ಣವ್ಯತ್ಯಾಸದಂತೆ ವರ್ಗ

ವ್ಯತ್ಯಾಸಗಳಿಂದಲೂ ಆಗಬಹುದಾದ ಲೌಕಿಕ ಆಧ್ಯಾತ್ಮಿಕ ಅನಾಹುತದ ಬಗ್ಗೆ ಎಚ್ಚರಿಸಿದ್ದಾರೆ. 'ಲಿಂಗಭೇದ' ಬಹುಶಃ ವಚನಕಾರರ ಸ್ತ್ರೀ ಸಮಾನತೆಯ ತಳಹದಿಗೆ ವಚನಕಾರರ ಜೇಡರದಾಸಿಮಯ್ಯನ ನಡಿವೆ ಸುಳಿವಾತ್ಮ ಗಂಡೂ ಅಲ್ಲ ಹೆಣ್ಣು ಅಲ್ಲ ವಚನವೇ ಪ್ರೇರಣೆ ಎಂದು ಕಾಣಿಸುತ್ತದೆ. 'ಕಾಯಕನಿಷ್ಠೆ' ಅನ್ನದ ಋಣಕ್ಕಾಗಿ ಅನ್ಯರ ಹಂಗಿನಲ್ಲಿ ಬಾಳದ ಬದುಕನ್ನು ಸಮರ್ಥಿಸಿದ್ದಾರೆ, 'ದಾಸೋಹ ಪ್ರಸಾದ' ಲಿಂಗವಿದ್ದಲ್ಲಿ ಹೊಲೆ ಜಂಗಮವಿದ್ದಲ್ಲಿ ಕುಲ, ಪ್ರಸಾದವಿದ್ದಲ್ಲಿ ಎಂಜಲು ಇರಲು ಸಾಧ್ಯವಿದೆಯೇ ಎಂದು ಪ್ರಶ್ನಿಸುತ್ತಾನೆ. ಈ ಬಗೆಯ ಪ್ರಸಾದದೃಷ್ಟಿ ಇರುವುದರಿಂದಲೇ ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ ಕೂಡಲಸಂಗಮ ದೇವನಲ್ಲದೆ ಆರೂ ಇಲ್ಲಾ ಎಂದು ಹೆಂಡತಿಗೆ ಸ್ಪಷ್ಟಪಡಿಸುತ್ತಾನೆ.

ಕರಿಯನಿತ್ತಡೆ ಒಲ್ಲೆ ಸಿರಿಯ ನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯನೊಂದರೆಗಳಿಗೆಯಿತ್ತಡೆ
ನಿಮ್ಮನಿತ್ತೆ ಕಾಣಾ ರಾಮನಾಥಾ

ಜೇಡರ ದಾಸಿಮಯ್ಯ ಎಲ್ಲಾ ಶರಣರ ವಚನಗಳಿಗೆ ಮಹತ್ವವನ್ನು ತಂದುಕೊಟ್ಟರು 'ಶರಣರ ಸೂಳ್ನುಡಿ' ಮುಖ್ಯವಾಗಿ ಸಾಮಾಜಿಕ ಪ್ರಜ್ಞೆಯುಳ್ಳ ನೀತಿ ಬೋಧಕರು ಸಮಾಜ ವಿಮರ್ಶಕರು ತಮ್ಮ ಅನುಭಾವವನ್ನು ಜನತೆಯ ಜೊತೆ ಹಂಚಿಕೊಳ್ಳಲು ಬಯಸಿದವರು ಸಾಹಿತ್ಯಿಕ ದೃಷ್ಟಿಯಿಂದ ವಚನಕಾರರಿಗಿಂತ ವಚನಗಳು ಮುಖ್ಯವಾಗುತ್ತವೆ. ಆದರೆ ಸಾಮಾಜಿಕ ಕ್ರಾಂತಿಯ ದೃಷ್ಟಿಯಿಂದ ವಚನಕಾರರು ಮುಖ್ಯವಾಗುತ್ತಾರೆ, ವಚನಗಳು ಸಾಮಾಜಿಕ ಧಾರ್ಮಿಕ ಕ್ಷೇತ್ರದಲ್ಲಿ ಶರಣರು ಕ್ರಾಂತಿಯನ್ನುಂಟುಮಾಡಲು ಬಳಸಿದ ಮೌಲ್ಯಗಳಾಗಿವೆ. ಅತ್ಯುತ್ತಮ ಸಾಹಿತ್ಯದ ಮೆರಗನ್ನು ಅವು ಪಡೆದಿವೆ. ಸಾಮಾಜಿಕ ಧಾರ್ಮಿಕ ಆಂದೋಲನಕ್ಕಾಗಿ ಮತ್ತು ಆಂದೋಲನದ ಫಲವಾಗಿ ವಚನಗಳು ಮೂಡಿಬಂದವು. ಎಂದು ಪರಿಭಾವಿಸಿದಾಗ ಬಸವ, ಅಲ್ಲಮ ಮುಂತಾದವರ ಬರಹಗಳಲ್ಲಿ ಕೆಲವು ಮಾತ್ರ ಮುಖ್ಯವಾಗುವುದಿಲ್ಲ; ಎಲ್ಲವೂ ಮುಖ್ಯವಾಗುತ್ತವೆ.

ಕೆರೆ ಹಳ್ಳ ಬಾವಿಗಳು ಮೈದೆಗೆದರೆ
ಗುಳ್ಳೆ ಗೊರಚೆ ಚಿಪ್ಪು ಕಾಣಬಹುದು
ವಾರಿಧಿ ಮೈದೆಗೆದರೆ ರತ್ನಂಗಳ ಕಾಣಬಹುದು
ಕೂಡಲ ಸಂಗನ ಶರಣರು ಮನದೆರೆದು ಮಾತನಾಡಿದರೆ ಲಿಂಗವ ಕಾಣಬಹುದು.

ಕೆರೆ, ಹಳ್ಳ, ಬಾವಿ, ಸಮುದ್ರ, ಶರಣರು, ಗುಳ್ಳೆಗೊರಚೆ, ಚಿಪ್ಪು–ರತ್ನ–ಲಿಂಗ; ಹೀಗೆ ಚಿತ್ರ ಬೆಳೆದು ಕೊಂಡು ಹೋಗುತ್ತದೆ. ಆದರೆ ಶರಣರು ಮನದೆರೆದು ಮಾತನಾಡಿದರೆ ಅಲ್ಲಿ 'ಲಿಂಗವೇ' ಕಾಣುತ್ತದೆ ಎಂಬ ಶಿಖರಕ್ಕೆ ಹಂತ ಹಂತವಾಗಿ ಓದುಗರನ್ನು ಕೊಂಡೊಯ್ಯುವ ರೀತಿ ಅತ್ಯಂತ ಅಪೂರ್ವವಾಗಿ ಸಮುದ್ರದ ರತ್ನಗಳೂ ತಮ್ಮ ಬೆಲೆಯನ್ನು ಕಳೆದುಕೊಳ್ಳುತ್ತವೆ. ವಾರಿಧಿ ಮೈದೆಗೆದರೆ ಎಂಬ ಪರಿಕಲ್ಪನೆಯು ಅಷ್ಟಕ್ಕೆ ಭವ್ಯವಾಗಿದೆ ಈ ಭವ್ಯತೆ ಇನ್ನೊಂದಕ್ಕೆ ಬಾಗಿ ಸಮರ್ಪಿತವಾಗುತ್ತದೆ. ಶರಣರ ಮುಂದೆ ವಾರಿಧಿಯೂ ಅಲ್ಪವಾಗಿ ಪರಿಣಮಿಸುತ್ತದೆ. ವಚನಗಳು ಕನ್ನಡಕ್ಕೆ ಅನುಭವದ ಹೊಸ ಕ್ಷೇತ್ರಗಳನ್ನು ಗೆದ್ದು ಅಭಿವ್ಯಕ್ತಿಗೆ ಜನದ ಭಾಷೆಯು ಎಷ್ಟು ಪರಿಣಾಮಕಾರಿ ಮಾಧ್ಯಮವೆಂಬುದನ್ನು ತೋರಿಸಿಕೊಟ್ಟವು. ಸಾಮಾಜಿಕವಾಗಿ ಅವು ವಹಿಸಿದ ಪಾತ್ರವನ್ನು ಉದ್ದಕ್ಕೂ ಗಮನಿಸುತ್ತ ಬಂದಿದ್ದೇವೆ. ಜನಗಳಲ್ಲಿ ನೀತಿ ಬೋಧನೆ ಮಾಡಲು ಧರ್ಮ ಪ್ರಸಾರವಾಗಲೂ ಅವು ಮಾಧ್ಯಮವಾದುವು ಅವುಗಳನ್ನು ಕರ್ನಾಟಕದ ಆಚೆಯ ದೇಶ ವಿದೇಶಗಳಲ್ಲೂ ಭಕ್ತಿವರ್ಗದವರು ಹಾಡಿ ಸಂತೋಷಿಸಿದರು. ಹನ್ನೆರಡನೆಯ ಶತಮಾನದ ಬಳಿಕ ವಚನಗಳು ಕನ್ನಡ ಕಾವ್ಯ ಸಾಗುತ್ತಿದ್ದ ಜಾಡನ್ನೇ ಬದಲಿಸಿವುದು ವಸ್ತುವಿನ ಆಯ್ಕೆ ಧೋರಣೆ ಭಾಷೆಗಳ ಮೇಲೆ ಅಪಾರ ಪ್ರಭಾವವನ್ನು ಬೀರಿದವು.

ಆಕರ ಗ್ರಂಥಗಳು

- ಚಿದಾನಂದಮೂರ್ತಿ, ಎಂ. (1975). *ವಚನ ಸಾಹಿತ್ಯ ಸಂಪುಟ-5.* ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ.
- ಶಾಂತಾ ಇಮ್ರಾಪೂರ. (2007). *ಸಾಹಿತ್ಯ ಸಂವೇದನೆ.* ಚಿತ್ತಾರ

ಪರಾಮರ್ಶನ ಗ್ರಂಥಗಳು

- ಬಸವರಾಜು ಎಲ್. (2005). *ಶ್ರೀ ಘನಲಿಂಗದೇವರ ವಚನಗಳು.* ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ.
- ಕಲ್ಮಠ ಎಸ್.ವ್ಹಿ. (1972). *ಬಸವಣ್ಣನವರ ವಚನಗಳು.* ಬಿ.ಜಿ.ಸಂಕೇಶ್ವರ ವಿಜಯಾ ಪ್ರಿಂಟಿಂಗ್ ಪ್ರೆಸ್.
- ನಾಗರಾಜು. ಟಿ. (1999). *ಸಾಮಾಜಿಕ ಚಳುವಳಿಗಳು.* ಚೇತನ್ ಬುಕ್ ಹೌಸ್.
- ಪ್ರಭುಸ್ವಾಮಿಮಠ ಸಿ.ಪಿ. (1996). *ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ.* ಅಕ್ಷರ ಪ್ರಕಾಶನ.
- ಸಿದ್ದಯ್ಯ ಪುರಾಣಿಕ. (1992). *ಶರಣ ಚರಿತಾಮೃತ.* ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ.